Indian Journal of History and Archaeology

ISSN (E):2582-225X
VOL-2, ISSUE -4,NOVEMBER-DECEMBER, 2020, 01-07

# ಹೆಮ್ಮರಗಾಲದ ಸಂತಾನ ವೇಣುಗೋಪಾಲಸ್ವಾಮಿ ಮತ್ತು ಬೀರೇಶ್ವರ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ

**ಡಾ .ನೀಲಕಂಠಸ್ವಾಮಿ.**

**ಡಾ .ನೀಲಕಂಠಸ್ವಾಮಿ**
**ಪ್ರಾಂಶುಪಾಲರು**
ಸರ್ಕಾರಿ ಪ್ರಥಮ ದರ್ಜೆ
ಕಾಲೇಜು.ಯಳಂದೂರು

ಹೆಮ್ಮರಗಾಲ ಗ್ರಾಮವು ನಂಜನಗೂಡು ತಾಲೂಕಿಗೆ ಸೇರಿರುವ ಒಂದು ಗ್ರಾಮವಾಗಿದೆ. ಇದು ನಂಜನಗೂಡಿನಿಂದ ನೈರುತ್ಯಕ್ಕೆ 15 ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ತನ್ನದೇ ಆದಂತಹ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಪಡೆದುಕೊಂಡ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಸಂತಾನ ವೇಣುಗೋಪಾಲಸ್ವಾಮಿ ಮತ್ತು ಬೀರೇಶ್ವರ ದೇವಾಲಯಗಳು ಕಂಡುಬರುತ್ತವೆ.

ಈ ಗ್ರಾಮದಲ್ಲಿ ಕಣಶಿಲೆಯನ್ನು ಉಪಯೋಗಿಸಿ ಪೂರ್ವಾಭಿಮುಖವಾಗಿ ನಿರ್ಮಿಸಲಾಗಿರುವ ಸಂತಾನ ವೇಣುಗೋಪಾಲಸ್ವಾಮಿ ದೇವಾಲಯವಿದೆ. ಈ ದೇವಾಲಯವನ್ನು 13ನೇ ಶತಮಾನದಲ್ಲಿ ಆಳ್ವಿಕೆ ಮಾಡಿದ ಹೊಯ್ಸಳ ಅರಸರ ಕಾಲದಲ್ಲಿ ನಿರ್ಮಿಸಿದಂತೆ ಕಂಡುಬರುತ್ತದೆ. ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು ಇದರಲ್ಲಿ ಒಂದು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳು ಕಾಣಬರುತ್ತವೆ.

## ಗರ್ಭಗೃಹ

ಗರ್ಭಗೃಹವು 8ಅಡಿ ಉದ್ದ ಮತ್ತು 8 ಅಡಿ ಅಗಲವಾಗಿದ್ದು, ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿ ಒಂದು ಅಡಿ ಎತ್ತರವಿರುವ ಗರುಡ ಪೀಠದ ಮೇಲೆ ಸುಮಾರು ನಾಲ್ಕು ಅಡಿ ಎತ್ತರವಿರುವ ವೇಣುಗೋಪಾಲ ಸ್ವಾಮಿಯನ್ನು ಪ್ರತಿಷ್ಠಾಪಿಸಲಾಗಿದೆ. ಒಂಟಿಕಾಲಿನಲ್ಲಿ ನಿಂತು ತನ್ನ ಎರಡೂ ಕೈಗಳಲ್ಲಿ ಕೊಳಲನ್ನು ನುಡಿಸುತ್ತಿರುವ ಈ ಸುಂದರ ಮೂರ್ತಿಯ ಮೈಮೇಲೆ ಬಿಡಿಸಲಾಗಿರುವ ವಸ್ತ್ರಾಭರಣಗಳು ಸುಂದರವಾಗಿವೆ. ಪ್ರಭಾವಳಿಯಲ್ಲಿ ಬಳ್ಳಿ ಸುರುಳಿ

ಕೀರ್ತಿಮುಖವನ್ನು ಬಿಡಿಸಲಾಗಿದೆ. ಗರ್ಭಗೃಹದ ಮೇಲ್ಛಾವಣಿ ಸರಳವಾಗಿದೆ. ಇದರ ದ್ವಾರದಲ್ಲಿ ಯಾವುದೇ ಕೆತ್ತನೆ ಮಾಡಿದ ಅಲಂಕರಣದ ಪಟ್ಟಿಕೆಗಳು ಕಾಣಬರುವುದಿಲ್ಲ.

**ಸುಖನಾಸಿ**

ಸುಖನಾಸಿಯು ಗರ್ಭಗೃಹದಷ್ಟೇ ಉದ್ದ ಮತ್ತು ಅಗಲವಾಗಿದ್ದು ಚೌಕಾಕಾರವಾಗಿದೆ. ಸರಳವಾಗಿರುವ ಇದರಲ್ಲಿ ಯಾವುದೇ ಸುಂದರವಾದ ಮೂರ್ತಿಶಿಲ್ಪಗಳು ಕಂಡು ಬರುವುದಿಲ್ಲ. ಇದರ ಮೇಲ್ಛಾವಣಿ ಸರಳವಾಗಿದೆ ಮತ್ತು ಬಾಗಿಲೂ ಸಹ ಸರಳವಾಗಿದೆ.

**ನವರಂಗ**

ಸುಖನಾಸಿಯ ಮುಂದೆ 25 ಅಡಿ ಉದ್ದ ಮತ್ತು 25 ಅಗಲವಾಗಿರುವ ಈ ವಿಶಾಲವಾದ ಅಂಗಳದ ಮಧ್ಯದಲ್ಲಿ ಮೇಲ್ಛಾವಣಿಗೆ ಆಧಾರವಾಗಿ ನಿಲ್ಲಿಸಲಾಗಿರುವ ನಾಲ್ಕು ಕಂಬಗಳಿವೆ. ಇವು ಪೀಠದಲ್ಲಿ ಚೌಕಾಕಾರವಾಗಿದ್ದು ಕಾಂಡದ ಭಾಗ ಸಿಲೆಂಡರಿನಾಕಾರದಲ್ಲಿದೆ. ಇದರ ಮೇಲೆ ರಚಿಸಲಾದ ಕಪೋತವು ಸರಳವಾಗಿದೆ. ಮೇಲ್ಛಾವಣಿಗೆ ಕಲ್ಲು ಚಪ್ಪಡಿಗಳನ್ನು ಹಾಕಿ ಮುಚ್ಚಲಾಗಿದೆ. ಇದರ ದಕ್ಷಿಣ ಭಾಗದ ಗೋಡೆಯ ಮುಂದೆ ಕೃಷ್ಣ ರುಕ್ಮಿಣಿಯರ ಸುಂದರವಾದ ಲೋಹದ ಮೂರ್ತಿಗಳು, ರುಕ್ಮಿಣಿ, ಸತ್ಯಭಾಮರ ಮೂರ್ತಿಗಳನ್ನು ಲೋಹದಿಂದ ಮಾಡಿಸಿ ಅವುಗಳನ್ನು ಉತ್ಸವ ಮೂರ್ತಿಗಳೆಂದು ಕರೆಯುತ್ತಾರೆ. ಈ ನವರಂಗದ ಈಶಾನ್ಯ ಮೂಲೆಯಲ್ಲಿ ಮತ್ತು ನೈರುತ್ಯ ಮೂಲೆಯಲ್ಲಿ ಚಿಕ್ಕ ಕೋಣೆಗಳನ್ನು ಮಾಡಿ ಇವುಗಳ ಒಳಗೆ ರುಕ್ಮಿಣಿ ಮತ್ತು ಸತ್ಯಭಾಮೆಯರ ಶಿಲ್ಪಗಳನ್ನು ಇರಿಸಲಾಗಿದೆ. ಈ ನವರಂಗಕ್ಕೆ ಎಡ ಮತ್ತು ಬಲಭಾಗದಲ್ಲಿ ಒಂದೊಂದು ದ್ವಾರವನ್ನು ಕಲ್ಪಿಸಲಾಗಿದೆ. ನವರಂಗದಿಂದ ಸುಖನಾಸಿ ಮತ್ತು ಗರ್ಭಗೃಹಕ್ಕೆ ಸುತ್ತಲೂ ಪ್ರದಕ್ಷಿಣಾ ಪಥವನ್ನು ಕಲ್ಪಿಸಲಾಗಿದೆ. ನವರಂಗದ ದ್ವಾರ ಸರಳವಾಗಿದೆ. ಇದರಲ್ಲಿ ಯಾವುದೇ ಮಾದರಿಯ ಪಟ್ಟಿಕೆಗಳು ಕಾಣಬರುವುದಿಲ್ಲ. ಗಾರೆಯನ್ನು ಉಪಯೋಗಿಸಿ ಗೂಡುಗಳನ್ನು ಕಟ್ಟಿದ್ದಾರೆ.

**ಮುಖಮಂಟಪ**

ನವರಂಗದ ಮುಂದಿರುವ ಮುಖಮಂಟಪವು ಆಯತಾಕಾರವಾಗಿದೆ. ಇದರಲ್ಲಿ ನಾಲ್ಕು ಕಂಬಗಳ ಮೇಲೆ ನಿಲ್ಲಿಸಲಾಗಿರುವ ಮೇಲ್ಛಾವಣಿ ಇದೆ. ಕಂಬಗಳ ಚೌಕ, ಅಷ್ಟಮುಖಗಳನ್ನು ಹೊಂದಿದ್ದು ಕಂಬಗಳ ಮೇಲೆ ವಿವಿಧ ದೇವದೇವತಾ ಮೂರ್ತಿಶಿಲ್ಪಗಳನ್ನು ಬಿಡಿಸಲಾಗಿದೆ. (ನೃತ್ಯಗಾರರು, ಸಂಗೀತಗಾರರು, ವೀರಯೋಧರು, ಪಕ್ಷಿಗಳು, ಕಮಲದ ಪುಷ್ಪಗಳನ್ನು ಬಿಡಿಸಲಾಗಿದೆ.) ಮೇಲ್ಛಾವಣಿಗೆ ಕಣಶಿಲೆಯ ಕಲ್ಲು ಚಪ್ಪಡಿಗಳನ್ನು ಹಾಸಿ ಮುಚ್ಚಲಾಗಿದೆ. ಈ ದೇವಾಲಯದ ನವರಂಗದ ದಕ್ಷಿಣ ದ್ವಾರದ ಮುಂದೆ ಎರಡು

ಕಂಬಗಳ ಮೇಲೆ ಮೇಲ್ಛಾವಣಿ ನಿಲ್ಲಿಸಿ ಕಟ್ಟಲಾಗಿರುವ ಮುಖಮಂಟಪವಿದೆ. ಇಲ್ಲಿರುವ ಕಂಬಗಳನ್ನು ವಿಜಯನಗರ ಶೈಲಿಯಲ್ಲಿ ರಚಿಸಿದಂತೆ ಕಂಡುಬರುತ್ತದೆ. ಕಪೋತದಲ್ಲಿ ಬಾಳೆಗೊನೆಯಾಕಾರದ ಮಾಲೆಗಳನ್ನು ಬಿಡಿಸಲಾಗಿದೆ. ಮುಖಮಂಟಪದ ಎರಡೂ ಕಡೆ ಸೋಪಾನಗಳನ್ನು ಮಾಡಲಾಗಿದೆ.

ಮುಖಮಂಟಪದ ಮುಂದೆ ಚೌಕಾಕಾರದ ನಾಲ್ಕು ಅಡಿಗಳ ಎತ್ತರವಿರುವ ವೇದಿಕೆಯ ಮೇಲೆ 25 ಅಡಿ ಎತ್ತರವಿರುವ ಗರುಡಗಂಭವನ್ನು ನಿಲ್ಲಿಸಲಾಗಿದೆ. ಇದಕ್ಕೆ ಪಂಚಲೋಹದ ವೇದಿಕೆಯನ್ನು ಮಾಡಲಾಗಿದೆ. ಕಂಬದ ಮುಂದೆ ಸುಮಾರು ನಾಲ್ಕು ಅಡಿ ಎತ್ತರವಿರುವ ಪಿರಮಿಡ್ಡಿನಾಕಾರದ ಬಲಿಪೀಠವನ್ನು ನಿರ್ಮಿಸಲಾಗಿದೆ.

**ಅಧಿಷ್ಠಾನ**

ತಳನಕ್ಷೆಯ ಮೇಲೆ ಉಪಾನವನ್ನು ಕಟ್ಟಿ ಅದರ ಮೇಲೆ ಮಂಚಬಂಧ ಅಧಿಷ್ಠಾನವನ್ನು ನಿರ್ಮಿಸಲಾಗಿದೆ. ಅಧಿಷ್ಠಾನದ ಮೇಲೆ ಭಿತ್ತಿಯನ್ನು ದಪ್ಪನಾಗಿರುವ ಸೈಜುಗಲ್ಲುಗಳನ್ನು ಉಪಯೋಗಿಸಿ ಭಿತ್ತಿಯನ್ನು ನಿರ್ಮಿಸಲಾಗಿದೆ. ಸರಳವಾಗಿರುವ ಈ ಭಿತ್ತಿಯಲ್ಲಿ ಯಾವುದೇ ರೀತಿಯ ಅಲಂಕರಣ ಕಾಣಬರುವುದಿಲ್ಲ. ಭಿತ್ತಿಯ ಮೇಲಿರುವ ಕಪೋತವು ಭಿತ್ತಿಯಿಂದ ಸ್ವಲ್ಪ ಮುಂಚಾಚಿತ್ತು. ಕಮಾನಿನಾಕಾರದ ದಿಂಡನ್ನು ಸೇರಿಸಿದ್ದಾರೆ. ಕಪೋತದ ಮೇಲೆ ಹಾರ ಕಾಣಬರುವುದಿಲ್ಲ. ಮುಖಮಂಟಪದ ಮೇಲೆ ಒಂದು ಕೋಷ್ಟಗುಡಿಯನ್ನು ಇಟ್ಟಿಗೆ ಗಾರೆಯಿಂದ ಕಟ್ಟಲಾಗಿದೆ. ಮುಂಭಾಗದ ಭಿತ್ತಿಗೆ ಬಣ್ಣ ಬಳಿಯಲಾಗಿದೆ. ಗರ್ಭಗೃಹ ಮತ್ತು ಸುಖನಾಸಿಯ ಮೇಲೆ ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿರುವ ದ್ವಿತಲ ಶಿಖರವಿದೆ, ಶಿಖರದ ನಾಲ್ಕು ದಿಕ್ಕುಗಳಲ್ಲಿ ಸಿಂಹಗಳು ವಿಷ್ಣುವಿನ ಮೂರ್ತಿಶಿಲ್ಪಗಳನ್ನು ಮತ್ತು ಸ್ತೂಪಿಯ ನಾಲ್ಕು ದಿಕ್ಕಿನಲ್ಲಿ ಕೀರ್ತಿಮುಖಗಳನ್ನು ಮಾಡಲಾಗಿದೆ. ಸ್ತೂಪಿಯ ಮೇಲೆ ಕಳಸವಿದೆ. ಈ ದೇವಾಲಯದ ನೈರುತ್ಯ ಮೂಲೆಯಲ್ಲಿ ಚೌಕಾಕಾರವಾಗಿ ಐದು ಅಡಿ ಎತ್ತರವಿರುವ ತುಳಸಿ ಕಟ್ಟೆ ಇದೆ, ಇದರ ಪಕ್ಕದಲ್ಲಿ ಕಲ್ಯಾಣಿ ಕಟ್ಟೆ ಇದೆ.

**ಬೀರೇಶ್ವರ ದೇವಾಲಯ**

ಈ ಗ್ರಾಮದಲ್ಲಿ ಬೀರೇಶ್ವರ ದೇವಾಲಯವನ್ನು ಕಣಶಿಲೆಯಲ್ಲಿ ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದ್ದು. ಇದೊಂದು ಏಕಕೂಟ ದೇವಾಲಯವಾಗಿದೆ. ಇದರಲ್ಲಿ ಒಂದು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳು ಕಂಡುಬರುತ್ತವೆ. ಈ ದೇವಾಲಯವನ್ನು ತೆರಕಣಾಂಬಿ ಚಿನ್ನಯ್ಯನಿಂದ ನಿರ್ಮಾಣ ಮಾಡಿಸಲಾಗಿದ್ದು ಮೈಸೂರು ಒಡೆಯರು ಕ್ರಿ.ಶ.1653ರಲ್ಲಿ ಜೀರ್ಣೋದ್ಧಾರ

ಮಾಡಿಸಿದರೆಂದು ಹೇಳಲಾಗುತ್ತಿದೆ. ಇಲ್ಲಿರುವ ಗರ್ಭಗುಡಿಯಲ್ಲಿ ದ್ವಿಮುಖ ಶಿಲ್ಪವನ್ನು ರಚಿಸಲಾಗಿದೆ. ಒಂದು ಭಾಗ ಶಿವನಂತೆ ಮತ್ತೊಂದು ಭಾಗ ವಿಷ್ಣುವಿನಂತೆ ಕಂಡುಬರುತ್ತದೆ. ಶಿವನ ಮುಖಕ್ಕೆ ಭಸ್ಮ, ವಿಷ್ಣುವಿನ ಮುಖಕ್ಕೆ ನಾಮವನ್ನು ಹಚ್ಚುತ್ತಾರೆ.

**ಗರ್ಭಗೃಹ**

ಗರ್ಭಗೃಹವು 8 ಅಡಿಗಳು ಉದ್ದ ಮತ್ತು 8 ಅಡಿ ಅಗಲವನ್ನು ಹೊಂದಿದ್ದು ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿ ಎರಡು ಪಾಣಿಪೀಠದ ಮೇಲೆ ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದ್ದು ಒಂದು ಲಿಂಗವನ್ನು ಶಿವನ ಪ್ರತೀತಿಯೆಂದು ಮತ್ತೊಂದು ಲಿಂಗವನ್ನು ವಿಷ್ಣುವಿನ ಪ್ರತೀಕವೆಂದು ಆರಾಧಿಸುತ್ತಿದ್ದಾರೆ. ಗರ್ಭಗೃಹದ ಮೇಲ್ಛಾವಣಿ ಸರಳವಾಗಿದೆ ಮತ್ತು ಬಾಗಿಲೂ ಸಹ ಸರಳವಾಗಿದ್ದು ಯಾವುದೇ ರೀತಿಯ ಅಲಂಕರಣವಿಲ್ಲ.

**ಸುಖನಾಸಿ**:–ಸುಖನಾಸಿ ಗರ್ಭಗೃಹದಷ್ಟೇ ಉದ್ದ ಮತ್ತು ಅಗಲವನ್ನು ಹೊಂದಿದ್ದು ಚೌಕಾಕಾರವಾಗಿದೆ. ಇದರಲ್ಲಿ ಯಾವುದೇ ಮೂರ್ತಿಯಾಗಲಿ, ಅಲಂಕರಣೆಯಾಗಲಿ ಕಂಡುಬರುವುದಿಲ್ಲ. ಈ ಸುಖನಾಸಿಯ ದ್ವಾರವೂ ಸಹ ಸರಳವಾಗಿದೆ, ಇಕ್ಕೆಲಗಳಲ್ಲಿ ದ್ವಾರಪಾಲಕರು ನಿಂತಿದ್ದಾರೆ.

**ಅಂತರಾಳ**:–ಸುಖನಾಸಿಯ ಮುಂದೆ ಅಷ್ಟೇ ಉದ್ದ ಅಗಲವಾಗಿರುವ ಅಂತರಾಳವಿದೆ. ಇದರಲ್ಲಿಯೂ ಸಹ ಯಾವುದೇ ಮೂರ್ತಿಶಿಲ್ಪಗಳು ಅಲಂಕರಣೆ ಕಂಡುಬರುವುದಿಲ್ಲ.

**ನವರಂಗ**:–ನವರಂಗವು 15 ಅಡಿಗಳು ಉದ್ದಮತ್ತು 15 ಅಡಿ ಅಗಲವಾಗಿದೆ. ಇದರ ಮಧ್ಯದಲ್ಲಿ ಮೇಲ್ಛಾವಣಿಗೆ ಆಧಾರವಾಗಿ ನಿಂತಿರುವ ನಾಲ್ಕು ಕಂಬಗಳಿದ್ದು, ಇವು ಚೌಕ ಅಷ್ಟಮುಖವನ್ನು ಹೊಂದಿದ್ದು ವಿಜಯನಗರ ಶೈಲಿಯಲ್ಲಿವೆ. ಕಂಬದ ಮಧ್ಯದಲ್ಲಿರುವ ಚೌಕಾಕಾರದ ಪಟ್ಟಿಯಲ್ಲಿ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಕಪೋತವು ಸರಳವಾಗಿದೆ, ಮೇಲ್ಛಾವಣಿಗೆ ಕಲ್ಲಿನ ಚಪ್ಪಡಿಗಳನ್ನು ಹಾಸಿ ಮುಚ್ಚಲಾಗಿದೆ. ಮಧ್ಯದಲ್ಲಿ ನಕ್ಷತ್ರಾಕಾರವಾಗಿರುವ ಭುವನೇಶ್ವರಿಯಿದೆ, ಇದರಲ್ಲಿ ಅರಳಿದ ಪದ್ಮಪುಷ್ಪ ಬಿಡಿಸಲಾಗಿದೆ.

ನವರಂಗದ ದ್ವಾರವು ಅಲಂಕರಣದಿಂದ ಕೂಡಿದ್ದು ಪಟ್ಟಿಕೆಗಳಲ್ಲಿ ಬಳ್ಳಿ ಸುರುಳಿ ಪದ್ಮದ ದಳಗಳ ಕೆತ್ತನೆ ಮಾಡಲಾಗಿದೆ. ಲಲಾಟಬಿಂಬದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಲಕ್ಷ್ಮಿಯನ್ನು ಬಿಡಿಸಲಾಗಿದೆ. ಬಾಗಿಲ ಇಕ್ಕೆಲಗಳಲ್ಲಿ ಒಂಟಿಕಾಲಿನಲ್ಲಿ ನಿಂತು ಚತುರ್ಭುಜವನ್ನು ಹೊಂದಿರುವ ದ್ವಾರಪಾಲಕರಿದ್ದಾರೆ. ಇವರು ಕೈಗಳಲ್ಲಿ ಶಂಖ, ಚಕ್ರ, ಹಸ್ತ ಒಂದು ಕೈಯನ್ನು ಸೊಂಟದ ಮೇಲಿರಿಸಿದ್ದಾರೆ. ಇವರ ಪಕ್ಕದಲ್ಲಿ

ಸಮಭಂಗಿಯಲ್ಲಿ ನಿಂತಿರುವ ಚಾಮರಧಾರಿಣಿಯರಿದ್ದಾರೆ. ಮರದಿಂದ ಜೋಡಿಸಲಾದ ಬಾಗಿಲ ಚೌಕಟ್ಟಿನ ಒಳಗಿನ ವೃತ್ತಾಕಾರದಲ್ಲಿ ಹಂಸಗಳನ್ನು ಬಿಡಿಸಲಾಗಿದೆ.

**ಮುಖಮಂಟಪ**:–ಮುಖಮಂಟಪದ ಮುಂದೆ ಸಾಲಾಗಿ ನಿಲ್ಲಿಸಲಾಗಿರುವ ನಾಲ್ಕು ಕಂಬಗಳಿವೆ. ಇವುಗಳು ಚೌಕ ಅಷ್ಟಮುಖವನ್ನು ಹೊಂದಿದೆ. ಕಂಬದಲ್ಲಿರುವ ಚೌಕದಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ. ಮೇಲ್ಛಾವಣಿಗೆ ಕಲ್ಲನ್ನು ಹಾಸಿ ಮುಚ್ಚಲಾಗಿದೆ. ಕಂಬದ ಮೇಲಿರುವ ಸೂರು ಇಳಿಜಾರಾಗಿದೆ. ಇದರ ಮೇಲಿನ ಹಾರದಲ್ಲಿ ಇಟ್ಟಿಗೆ ಗಾರೆಯನ್ನು ಉಪಯೋಗಿಸಿ ಕಟ್ಟಲಾಗಿರುವ ದೇವಕೋಷ್ಟ ಗುಡಿಗಳಿವೆ. ಇವುಗಳ ಒಳಗೆ ವಿಷ್ಣು ಮತ್ತು ನಂದಿ ವಾಹನ, ಶಿವನ ಶಿಲ್ಪಗಳನ್ನು ರಚಿಸಲಾಗಿದೆ. ಇವುಗಳ ಮೇಲೆ ಗೋಪುರಗಳಿವೆ. ಮೂಲೆಗಳಲ್ಲಿ ನಂದಿಯ ಶಿಲ್ಪಗಳನ್ನು ಬಿಡಿಸಲಾಗಿದೆ.

**ಅಧಿಷ್ಠಾನ**:–ಅಧಿಷ್ಠಾನವು ಭೂಮಿಯಲ್ಲಿ ಊತುಹೋಗಿದೆ. ಭಿತ್ತಿಯನ್ನು ಕಲ್ಲಿನ ದಿಮ್ಮಿಗಳನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಭಿತ್ತಿಯ ಹೊರಭಾಗದಲ್ಲಿ ಅಲ್ಲಲ್ಲಿ ಕಲ್ಲಿನ ಕಂಬಗಳನ್ನು ಭದ್ರತೆಗಾಗಿ ಜೋಡಿಸಲಾಗಿದೆ. ಭಿತ್ತಿಯ ಮೇಲಿರುವ ಕಪೋತವು ಇಳಿಜಾರಾಗಿದೆ. ಇದರ ಮೇಲೆ ಕೈಪಿಡಿಗೋಡೆ, ತರುವಾಯ ಅದರ ಮೇಲೆ ಇಟ್ಟಿಗೆ ಗಾರೆಯಲ್ಲಿ ನಿರ್ಮಿಸಲಾದ ಗೋಪುರಾಕಾರದ ಮತ್ತು ಕಮಾನಿನಾಕರವಿರುವ ಗೂಡುಗಳಿವೆ. ಇವುಗಳ ಒಳಗೆ ವಿಷ್ಣುವಿನ ಶಿವನ ಅವತಾರ ಮೂರ್ತಿಗಳನ್ನು ಬಿಡಿಸಲಾಗಿದೆ. ಈ ಗುಡಿಗಳ ಮೇಲೆ ಗೋಪುರಗಳಿವೆ. ನವರಂಗದ ಉತ್ತರ, ದಕ್ಷಿಣ ಭಾಗದಲ್ಲಿ ಒಂದೊಂದು ದ್ವಾರವನ್ನು ಮಾಡಲಾಗಿದೆ.

**ಶಿಖರ**:–ಗರ್ಭಗೃಹ, ಸುಖನಾಸಿ ಸೇರಿದಂತೆ ಮೇಲೆ ಇಟ್ಟಿಗೆ ಗಾರೆಯಲ್ಲಿ ನಿರ್ಮಿಸಲಾಗಿರುವ ಏಕತಲ ಶಿಖರವಿದೆ, ಶಿಖರದ ಮೂಲೆಗಳಲ್ಲಿ ನಂದಿಶಿಲ್ಪಗಳನ್ನು ಬಿಡಿಸಲಾಗಿದೆ. ಸ್ತೂಪಿಯ ನಾಲ್ಕು ದಿಕ್ಕುಗಳಲ್ಲಿ ಕೀರ್ತಿಮುಖಗಳನ್ನು ಬಿಡಿಸಲಾಗಿದೆ. ಇದರ ಮೇಲೆ ಕಳಸವಿದೆ. ಬೀರೇಶ್ವರ ದೇವಾಲಯದ ಸುತ್ತಲೂ ವಿಶಾಲವಾಗಿರುವ ಅಂಗಳವಿದೆ ಮತ್ತು ದೇವಾಲಯದ ಸುತ್ತಲೂ ಐದು ಅಡಿ ಎತ್ತರವಿರುವ ಪ್ರಾಕಾರವಿದೆ.

ಒಟ್ಟಾರೆ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಹೊಯ್ಸಳರು ಮತ್ತು ಮೈಸೂರು ಒಡೆಯರ ಕಾಲದ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಈ ದೇವಾಲಯಗಳು ವಾಸ್ತುಶಿಲ್ಪದ ಸೊಬಗನ್ನು ಕಲಾತ್ಮಕವಾಗಿ ಬಿಂಬಿಸುವ ಪ್ರತೀಕವಾಗಿವೆ ಎಂದು ಹೇಳಬಹುದು.

**ಛಾಯಾಚಿತ್ರಗಳು**




**ಹೆಮ್ಮರಗಾಲ–ಸಂತಾನ ವೇಣುಗೋಪಾಲಸ್ವಾಮಿ ದೇವಾಲಯ,** **ನವರಂಗದ ಕಂಬ**




**ಅಧಿಷ್ಠಾನ** **ಕಲ್ಯಾಣಿ ಕಟ್ಟೆ**

**ಪರಾಮರ್ಶನ ಗ್ರಂಥಗಳು:**

1. ಡಾ.ಮಂಜುಳ ಹುಲ್ಲಹಳ್ಳಿ–ನಂಜನಗೂಡು ತಾಲೂಕು ಗೆಜೆಟಿಯರ್, 2017.
2. ಮಲೆಯೂರು ಗುರುಸ್ವಾಮಿ–ಜಂಗಮ, ಮೈಸೂರು, 1997–98.

3. ಡಾ.ಮಂಜುಳ ಹುಲ್ಲಹಳ್ಳಿ–ನಂಜನಗೂಡು ತಾಲೂಕಿನ ಸಾಂಸ್ಕೃತಿಕ ಅಧ್ಯಯನ, ಮೈಸೂರು, ೨೦೦೦
4. ಕೂ.ಸ.ಅಪರ್ಣ–ದೇವಾಲಯದ ವಾಸ್ತು ಪರಿಚಯ, ಹಂಪಿ, 1999
5. ಶ್ರೀಕಂಠಶಾಸ್ತ್ರಿ, ಎಸ್.–ಹೊಯ್ಸಳ ವಾಸ್ತುಶಿಲ್ಪ, ಮೈಸೂರು, 1986
6. ಪ್ರಭಾಕರ.ಎಂ.ಎನ್.–ದೇವಾಲಯ ವಾಸ್ತು ಪರಿಚಯ. ಹಂಪಿ. 1999
7. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯನ್ನು ಆಧರಿಸಿ ಬರೆಯಲಾಗಿದೆ.